## ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.

ಸಿ ಮಿಸ್ ನಂ. 268/2014

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಮಹಾಲಕ್ಷ್ಮಿ | ಪಿ ಡಬ್ಲ್ಯೂಃ | 1 |
| ತಂದೆಯ / ಗಂಡನ ಹೆಸರು | ಃ | ನಂಜುಂಡಸ್ವಾಮಿ | ಸಿ ಡಬ್ಲ್ಯೂಃ | |
| ವಯಸ್ಸು | ಃ | 40 ವರ್ಷ | ಡಿ ಡಬ್ಲ್ಯೂಃ | |
| ದ್ಯೋಗ | ಃ | ಕೂಲಿಕೆಲಸ | ಆರ್ ಡಬ್ಲ್ಯೂಃ | |
| ವಾಸಸ್ಥಳ | ಃ | ತಡಿಮಾಲಂಗಿ ಗ್ರಾಮ | ಪ್ರ.ವ.ಬೋ. ದಿಃ 15.02.2018 | |

ಮುಖ್ಯ ವಿಚಾರಣೆಃ ಕು|| ಕೆಟಿಎಸ್ ವಕೀಲರಿಂದಃ

ಪ್ರತಿವಾದಿ ನನ್ನ ಗಂಡ. ಸಾಕ್ಷಿಯು ಮುಂದುವರಿದು ನನ್ನ ಸೋದರ ಮಾವ ಎಂದು ನುಡಿಯುತ್ತಾರೆ. ನನ್ನ ಮದುವೆಯು 1991 ನೇ ಇಸವಿಯಲ್ಲಿ ಆಗಿರುತ್ತದೆ. ತಡಿಮಾಲಂಗಿಯಲ್ಲಿ ನನ್ನ ವಿವಾಹವು ಹಿಂದೂ ಸಂಪ್ರದಾಯದಂತೆ ಆಗಿರುತ್ತದೆ. ನನಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಕ್ಕಳಿದ್ದಾರೆ, ಮಗನಿಗೆ 17 ವರ್ಷ, ಮಗಳಿಗೆ 20 ವರ್ಷ ಪ್ರಾಯ. ಮಗಳಿಗೆ ವಿದ್ಯಾಭ್ಯಾಸ ಮುಗಿಸಿರುತ್ತಾರೆ ಅವರಿಗೆ ಈಗ ಮದುವೆಗೆ ನಿಶ್ಚಯವಾಗಿರುತ್ತದೆ. ಮಗನು 1 ನೇ ವರ್ಷ ಬಿಕಾಂ ವ್ಯಾಸಂಗ ಮಾಡುತ್ತಿದ್ದಾನೆ.

ಮದುವೆಯ ಸಮಯದಲ್ಲಿ ಪ್ರತಿವಾದಿಯು ಗಾರ್ಡ್ ಆಗಿ ಕೆ ಆರ್ ಎಸ್ ನಲ್ಲಿ ಕರ್ತವ್ಯ ಮಾಡುತ್ತಿದ್ದು ನಾನು ಅವರ ಕ್ವಾರ್ಟಸ್ ನಲ್ಲಿ ವಾಸವಾಗಿದ್ದೆನು 5 ವರ್ಷಗಳ ಕಾಲ ನಾವು ಚೆನ್ನಾಗಿದ್ದೆವು. ನಂತರ ಅವರು ರಾತ್ರಿ ಪಾಳೀಯಲ್ಲಿ ಕರ್ತವ್ಯ ಮಾಡುತ್ತಿದ್ದು ಹಗಲು ಪಾಳೀಯಲ್ಲಿ ಮನೆಗೆ ಬಂದು ಹೋಗುತ್ತಿದ್ದರು ಆದರೆ ಸರಿಯಾಗಿ ಸಾಮಾನು ತರುತ್ತಿರಲಿಲ್ಲ ಈ ಬಗ್ಗೆ ನಾನು ಕೇಳಿದಾಗ ಅವರು ಹೊಡಯುತ್ತಿದ್ದರು. ನಂತರ ನಾನು ಊರಿಗೆ ಹೋಗಿ ಅವರ ತಂದೆಗೆ ವಿಚಾರವನ್ನು ತಿಳಿಸಿ ರಾಜಿ ಪಂಚಾಯಿತಿ ಮಾಡಿದರು ರಾಜಿ ಪಂಚಾಯಿತಿಯಲ್ಲಿ ನನ್ನನ್ನು ಪ್ರತಿವಾದಿ ಮನೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು ಅದರಂತೆ ನಾನು ಹೋಗಿರುತ್ತೇನೆ. ನಂತರ ಪ್ರತಿವಾದಿಯು ಮಂಡ್ಯಕ್ಕೆ ವರ್ಗಾವಣೆ ಮಾಡಿಸಿಕೊಂಡು ಕ್ವಾರ್ಟಸ್ ಅವಶ್ಯಕತೆ ಇಲ್ಲ ಎಂದು ಬರೆದುಕೊಟ್ಟಿದ್ದು ಅದರಿಂದ ನನ್ನು ಕ್ವಾರ್ಟಸ್ ನಿಂದ ಖಾಲಿ ಮಾಡಿಸಿರುತ್ತಾರೆ ನಂತರ ನಾನು ನನ್ನ ತಾಯಿ ಮನೆಗೆ ಬಂದೆನು. ನಾನು ಮಂಡ್ಯಕ್ಕೆ ಹೋಗಲು ಪ್ರಯತ್ನಿಸಿದ್ದೇನೆ. ನಾನು ಪ್ರತಿವಾದಿಯ ಮೇಲಾಧಿಕಾರಿಯವರಿಗೆ ಅರ್ಜಿಯನ್ನು ನೀಡಿ ಜೀವನಾಂಶ ಕೇಳಿರುತ್ತೇನೆ ಅವರು ತಿಂಗಳಿಗೆ 2 ಸಾವಿರ ರೂಪಾಯಿ ನೀಡುವಂತೆ ತಾಕೀತು ಮಾಡಿರುತ್ತಾರೆ. ನಂತರ ಕೆ ಆರ್ ಎಸ್ ಕ್ವಾರ್ಟಸ್ ನಲ್ಲಿ ವಾಸಿಸಲು ಅನುಮತಿಯನ್ನು ನೀಡಿರುತ್ತಾರೆ ನಾನು ಸುಮಾರು ಒಂದು ವರ್ಷಗಳ ಕಾಲ ಕ್ವಾರ್ಟಸ್ ನಲ್ಲಿದ್ದೆ ಆ ಸಮಯದಲ್ಲಿ ಪ್ರತಿವಾದಿಯು ಬಂದಿರಲಿಲ್ಲ. 2 ಸಾವಿರ ಹಣವನ್ನು ಹೊರತುಪಡಿಸಿ ಬೇರೆ

ಯಾವುದೇ ಹಣವನ್ನು ನೀಡಿರಲಿಲ್ಲ. ನಂತರ ಪ್ರತಿವಾದಿಯು ನಾನು ಬೇಡವೆಂದರೂ ಕ್ವಾರ್ಟರ್ಸ್ ನ್ನು ನನ್ನ ಹೆಂಡತಿಗೆ ನೀಡಿರುತ್ತೀರಿ ಎಂದು ಆತನ ಮೇಲಾಧಿಕರಿಯವರಿಗೆ ಜಗಳ ಮಾಡಿರುತ್ತಾರೆ ನಂತರ ನಾನು ತಡಿ ಮಾಲಂಗಿಗೆ ಬಂದೆನು ಈಗ ನಾನು ತಡಿ ಮಾಲಂಗಿಯಲ್ಲಿ ನನ್ನ ತಂದೆ ಜೊತೆ ವಾಸವಾಗಿದ್ದೇನೆ.

ತಾಯಿ ಮನೆಗೆ ಬಂದು ನಾನು ಈಗ 5 ವರ್ಷ ವಾಯಿತು. ನಾನು ನನ್ನ ತವರು ಮನೆಗೆ ಬಂದಾಗಿನಿಂದ ಈ ಕೇಸನ್ನು ಹಾಕುವ ತನಕ ನನಗೆ ಪ್ರತಿವಾದಿಯು ಹಣವನ್ನು ನೀಡಿರುವುದಿಲ್ಲ. ನನ್ನ ಮಗಳ ಮದುವೆಯು ಈ ತಿಂಗಳ ತಾರೀಖು 20 , 21 ರಂದು ನಿಶ್ಚಯವಾಗಿರುತ್ತದೆ. ಸದರಿ ಮದುವೆಗೆ ರೂ. 5 ಲಕ್ಷ ಬೇಕಾಗುತ್ತದೆ. ಈ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ ಮುಂದಿನ ಸಲ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. 15 ಗುಂಟೆ ಜಮೀನು ಪ್ರತಿವಾದಿಯ ಹೆಸರಿಗೆ ಇದೆ. ತಡಿಮಾಲಂಗಿಯಲ್ಲಿ ಪ್ರತಿವಾದಿಗೆ ಮನೆ ಇದೆ. ತಿಂಗಳಿಗೆ ಪ್ರತಿವಾದಿಗೆ 30 ಸಾವಿರ ಸಂಬಳ ಬರುತ್ತದೆ.

<u>ಮುಂದುವರಿದ ಮುಖ್ಯ ವಿಚಾರಣೆ ಮಾಡಲು ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.</u>

ಓ ಹೇ ಕೇ ಸ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ತಿ.ನರಸೀಪುರ.